2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 60/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - ಮಂಜುನಾಥ್ ಬಿ ಎಸ್ | | ಪಿಡಬ್ಲ್ಯೂ - 22 |
| ತಂದೆಯ ಹೆಸರು | - ಬಿ ಎಂ ಸುಂದರ್ ರಾಜು | | ಸಿಡಬ್ಲ್ಯೂ -33 |
| ವಯಸ್ಸು | - 41 ವರ್ಷ | | |
| ಉದ್ಯೋಗ | - ಆರಕ್ಷಕ ನಿರೀಕ್ಷಕರು, ಜ್ಞಾನ ಭಾರತಿ ಪೊಲೀಸ್ ಠಾಣೆ, ಬೆಂಗಳೂರು | | |
| ವಾಸ ಸ್ಥಳ | - ಬೆಂಗಳೂರು | | |

ದಿನಾಂಕಃ 09.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿನಾಂಕಃ 30.01.2018 ರಿಂದ ದಿನಾಂಕ 27.04.2022 ರವರೆಗೆ ಕಡೂರು ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 24.12.2018 ರಂದು ಫ್ರಾಸಾ.21 ರವರಿಂದ ಈ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ. ಅದೇ ದಿನ ಕಂಚುಗಾರನಹಳ್ಳಿ ಯಲ್ಲಿರುವ ಮೃತ ಜಯಮ್ಮನ ವಾಸದ ಮನೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದೆನು. ಸದರಿ ಮನೆಯ ನಡು ಮನೆಯಲ್ಲಿ ಮೃತ ಜಯಮ್ಮನ ಶವವು ಅಂಗಾತವಾಗಿ ಬಿದ್ದಿತ್ತು. ಫ್ರಾಸಾ.13, ಫ್ರಾಸಾ.14, ಫ್ರಾಸಾ.15 ರವರಿಗೆ ನಮೂನೆ 144 ರ ರೀತಿ ಪಂಚರಾಗಿ ಸಹಕರಿಸುವಂತೆ ನಿಪಿ.18 ರಂತೆ ನೋಟೀಸನ್ನು

ಜಾರಿ ಮಾಡಿ ಅವರನ್ನು ಬರಮಾಡಿಕೊಂಡಿರುತ್ತೇನೆ. ನಿಪಿ.18 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.18(ಡಿ) ಎಂದು ಗುರುತಿಸಲಾಯಿತು.

3. ನಂತರ ಸದರಿ ಪಂಚರ ಸಮಕ್ಷಮ ಸಂಜೆ 5.30 ಗಂಟೆಯಿಂದ ರಾತ್ರಿ 8.30 ಗಂಟೆಯವರೆಗೆ ನಿಪಿ.19 ರಂತೆ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಶವ ತನಿಖೆಯ ಸಮಯದಲ್ಲಿ ಮೃತಳ ದವಡೆಯ ಎಡಬದಿಯ ನಾಲ್ಕು ಹಲ್ಲುಗಳು ಪುಡಿಯಾಗಿರುವುದು ಮತ್ತು ಗಲ್ಲದ ಎಡಭಾಗದ ಕಡೆಗೆ ಅರ್ಧ ಇಂಚು ವೃತ್ತಾಕಾರದ ರಕ್ತಗಾಯವಾಗಿರುವುದು, ಗಲ್ಲದ ಬಲಭಾಗದಲ್ಲಿ ಕಾಲು ಇಂಚು ವೃತ್ತಾಕಾರದ ಗಾಯವಿರುವುದು, ಪಕ್ಕೆಯ ಎಡಭಾಗದಲ್ಲಿ ಕಾಲು ಇಂಚು ಸುತ್ತಳತೆಯ ರಕ್ತಗಾಯವಿರುವುದು, ಎಡಗೈನ ತೋಳಿನ ಕೆಳಭಾಗದಲ್ಲಿ ಒಂದು ಇಂಚು ಉದ್ದದ ಮತ್ತು ಕಾಲು ಇಂಚು ಅಗಲದ ರಕ್ತಗಾಯವಿರುವುದು, ಬಲಭುಜದಲ್ಲಿ ಸುಮಾರು ಅರ್ಧ ಇಂಚು ವೃತ್ತಾಕಾರದ ರಕ್ತಗಾಯವಿರುವುದು ಮತ್ತು ಎಡಗಾಲಿನ ಪಾದದ ಮೇಲೆ ಸುಮಾರು ಒಂದು ಇಂಚು ಉದ್ದದ ರಕ್ತಗಾಯವಿರುವುದು ಕಂಡು ಬಂದಿರುತ್ತದೆ.

4. ಶವ ತನಿಖೆಯ ಸಮಯದಲ್ಲಿ ಮೃತಳ ಶವದ ಬಳಿ 5 ಖಾಲಿ ಗುಂಡುಗಳಿದ್ದು ಅವುಗಳಲ್ಲಿ ಕೆಲವುಗಳಿಗೆ ರಕ್ತದ ಕಲೆಗಳಿರುವುದು ಮತ್ತು ಅವುಗಳ ಹಿಂದೆ ಆಂಗ್ಲಭಾಷೆಯಲ್ಲಿ F ಎಂಬ ಅಕ್ಷರ ಮುದ್ರಿಸಿರುವುದು ಕಂಡು ಬಂದಿರುತ್ತದೆ. ಖಾಲಿ

ಗುಂಡುಗಳ ಉದ್ದ 1.5 ಸೆ ಮೀ ಇರುತ್ತದೆ. ಆಕೆಯ ತಲೆಯ ಬಳಿ ಒಂದು ಪೆಲೆಟ್ ನಂತಿರುವ ಮೆಟಲ್ ನ ಚೂರು ದೊರಕಿರುತ್ತದೆ ಮತ್ತು ಒಂದು ಮೋಟಾರು ಬೈಕಿನ ಸುಮಾರು 116 ಸೆ ಮೀ ಉದ್ದದ ವೀಲ್ ಚೈನ್ ದೊರಕಿರುತ್ತದೆ. ಅವುಗಳನ್ನು ಮುಂದಿನ ತನಿಖೆಗಾಗಿ ಪ್ರತ್ಯೇಕವಾಗಿ ಪ್ಲಾಸ್ಟಿಕ್ ಡಬ್ಬಗಳಲ್ಲಿ ಹಾಕಿ ಅವುಗಳನ್ನು ಬಿಳಿಯ ಬಟ್ಟೆಯಲ್ಲಿ ಹೊಲೆದು ಪಿ ಎಂಬ ಅಕ್ಷರದಿಂದ ಸೀಲು ಮಾಡಿ ಅವುಗಳ ಮೇಲೆ ಪಂಚರ ಸಹಿಗಳಿರುವ ಚೀಟಿಗಳನ್ನು ಅಂಟಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಕೃತ್ಯ ನಡೆದ ಸ್ಥಳದಲ್ಲಿ ಇದ್ದ ರಕ್ತವನ್ನು ಹತ್ತಿಯಿಂದ ಸ್ಯಾಂಪಲ್ ಗಾಗಿ ಸಂಗ್ರಹಿಸಿರುತ್ತೇನೆ . ನಿಪಿ.19 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.19(ಡಿ) ಎಂದು ಗುರುತಿಸಲಾಯಿತು.

5. ಸದರಿ ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 145/2018 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.37 ಎಂದು, ಸಾಕ್ಷಿಯ ನಿಪಿ.37 (ಎ) ಎಂದು ಗುರುತಿಸಲಾಯಿತು. ಸದರಿ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ.

6. ಸದರಿ ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ 5 ಖಾಲಿ ಗುಂಡುಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ

ಮು.ಮಾ.6 ಎಂದು, ಪೆಲೆಟ್ ನಂತಿರುವ ಮೆಟೆಲ್ ಚೂರನ್ನು ನೋಡುತ್ತಿದ್ದು ಅದನ್ನು ಮು.ಮಾ.7 ಎಂದು, ಮೋಟಾರು ಬೈಕಿನ ಸುಮಾರು 116 ಸೆ ಮೀ ಉದ್ದದ ವೀಲ್ ಚೈನ್ ನ್ನು ನೋಡುತ್ತಿದ್ದು ಅದನ್ನು ಮು.ಮಾ.8 ಎಂದು, ಕೃತ್ಯ ನಡೆದ ಸ್ಥಳದಲ್ಲಿದ್ದ ರಕ್ತವನ್ನು ಸಂಗ್ರಹಿಸಿದ ಹತ್ತಿಯನ್ನು ನೋಡುತ್ತಿದ್ದು ಅದನ್ನು ಮು.ಮಾ.9 ಎಂದು, ಮಾದರಿ ಹತ್ತಿಯನ್ನು ನೋಡುತ್ತಿದ್ದು ಅದನ್ನು ಮು.ಮಾ.10 ಎಂದು ಗುರುತಿಸಲಾಯಿತು. ಮು.ಮಾ.6 ರಿಂದ ಮು.ಮಾ.10 ವಸ್ತುಗಳು ಪ್ಲಾಸ್ಟಿಕ್ ಡಬ್ಬದಲ್ಲಿ ಇದ್ದು ಅವುಗಳನ್ನು ಬಿಳಿಯ ಬಟ್ಟೆಯಲ್ಲಿ ಹೊಲೆದು ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದು ಅವುಗಳನ್ನು ಈ ದಿನ ಆರೋಪಿಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಯಿತು.

7. ನಿಪಿ.19 ಪಂಚನಾಮೆಯ ಸಮಯದಲ್ಲಿ ಆರು ಫೋಟೋಗಳನ್ನು ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳ ಪೈಕಿ 5 ಫೋಟೋಗಳನ್ನು ಈಗಾಗಲೇ ನಿಪಿ.20 ರಿಂದ 24 ಎಂದು ಗುರುತಿಸಲಾಗಿದ್ದು ಮತ್ತೊಂದು ಫೋಟೋವನ್ನು ಈ ದಿನ ನಿಪಿ.38 ಎಂದು ಗುರುತಿಸಲಾಯಿತು.

8. ನಿಪಿ.19 ಪಂಚನಾಮೆಯ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ನಕ್ಷೆಯನ್ನು

ನೋಡುತ್ತಿದ್ದು ಅದನ್ನು ನಿಪಿ.39 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.39(ಎ) ಎಂದು ಗುರುತಿಸಲಾಯಿತು.

9. ಪಂಚನಾಮೆಯ ಸಮಯದಲ್ಲಿ ಸಾಕ್ಷಿದಾರರಾದ ಫ್ರಾಸಾ.16, ಫ್ರಾಸಾ.9, ಫ್ರಾಸಾ.17 ರವರ ಹೇಳಿಕೆಯನ್ನು ನಿಪಿ.25 ರಂತೆ, ಮತ್ತು ಚಾಸಾ.19 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

10. ದಿನಾಂಕ 25.12.2018 ರಂದು ಆರೋಪಿಯ ಪತ್ತೆಗಾಗಿ ಚಾಸಾ.21 ಮತ್ತು ಚಾಸಾ.22 ರವರನ್ನು ನೇಮಿಸಿರುತ್ತೇನೆ. ಅದರ ಮೇರೆಗೆ ಅವರು ಅದೇ ದಿನ ಬೆಳಿಗ್ಗೆ 11.30 ಗಂಟೆಗೆ ಕಲ್ಮರಡಿ ಮಠದ ಸಮೀಪ ಆರೋಪಿ ಮತ್ತು ಆತ ಕೃತ್ಯಕ್ಕೆ ಬಳಸಿದ್ದ ಕೆ ಎ 18 ಆರ್ 7758 ನೋಂದಣಿ ಸಂಖ್ಯೆಯುಳ್ಳ ಬೈಕನ್ನು ವಶಕ್ಕೆ ಪಡೆದು ತಂದು ಮಧ್ಯಾಹ್ನ 12.00 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ.

11. ಅದೇ ದಿನ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿ ಮಧ್ಯಾಹ್ನ 12.30 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಆರೋಪಿಯು ತನ್ನೊಂದಿಗೆ ಬಂದರೆ ತನ್ನ ಹೆಂಡತಿಯನ್ನು ಕೊಲೆ ಮಾಡಿದ ಸ್ಥಳ ಮತ್ತು ಕೃತ್ಯಕ್ಕೆ ಉಪಯೋಗಿಸಿದ ಗುಂಡುಗಳನ್ನು ಮತ್ತು ಪಿಸ್ತೂಲನ್ನು ತೋರಿಸಿ

ಹಾಜರುಪಡಿಸುವುದಾಗಿ ನುಡಿದಿರುತ್ತಾನೆ.

12. ಆರೋಪಿಯ ಸ್ವಇಚ್ಛಾ ಹೇಳಿಕೆಯ ಸದರಿ ಭಾಗವನ್ನು ನಿಪಿ.40 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.40(ಎ) ಎಂದು ಗುರುತಿಸಲಾಯಿತು. ಕೃತ್ಯವನ್ನು ಎಸಗಿದ ಸಮಯದಲ್ಲಿ ಆರೋಪಿಯು ತನ್ನ ಕೈಯಿಂದ ಗುಂಡನ್ನು ಸಿಡಿಸಿದಾಗ ಆತನ ಕೈಗೆ ಅಂಟಿದ್ದ ಮಸಿಯನ್ನು ಮತ್ತು ಆತನ ಬಟ್ಟೆಗಳನ್ನು ಅಮಾನತುಪಡಿಸಿಕೊಳ್ಳುವ ಸಲುವಾಗಿ ಫ್ರಾಸಾ.4 ಮತ್ತು ಫ್ರಾಸಾ.5 ರವರಿಗೆ ಪಂಚರಾಗಿ ಸಹಕರಿಸುವಂತೆ ನೋಟೀಸನ್ನು ಜಾರಿ ಮಾಡಿ ಅವರನ್ನು ಠಾಣೆಗೆ ಬರಮಾಡಿಕೊಂಡು ಸದರಿ ಪಂಚರ ಸಮಕ್ಷಮ 5 ಬಿಳಿ ಹತ್ತಿಯ ಸಣ್ಣ ಸಣ್ಣ ತುಂಡುಗಳನ್ನು ತೆಗೆದುಕೊಂಡು, ಅವುಗಳ ಮೇಲೆ ಡಿಸ್ಟಿಲ್ಡ್ ನೀರನ್ನು ಹಾಕಿ, ಆರೋಪಿಯ ಬಲಗೈನ ಬೆರಳುಗಳು ಮತ್ತು ಅಂಗೈನ ಮೇಲೆ ಸವರಿ ಸದರಿ ಹತ್ತಿಯ ತುಂಡುಗಳನ್ನು 5 ಪ್ರತ್ಯೇಕ ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಅವುಗಳನ್ನು ಒಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ಹಾಕಿ ಅದರ ಮುಚ್ಚಳವನ್ನು ಬಿಳಿಯ ಬಟ್ಟೆಯಿಂದ ಸುತ್ತಿ ಪಿ ಎಂಬ ಅಕ್ಷರದಿಂದ ಸೀಲು ಮಾಡಿ ಅದರ ಮೇಲೆ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ಸದರಿ ಪ್ಲಾಸ್ಟಿಕ್ ಡಬ್ಬಿಯನ್ನು ನೋಡುತ್ತಿದ್ದು, ಅದು ಎಫ್ ಎಸ್ ಎಲ್ ಸೀಲಿನಿಂದ ಸೀಲಾಗಿದ್ದು ಅದನ್ನು ಆರೋಪಿಪರ ವಕೀಲರು ಮತ್ತು ಸಾರ್ವಜನಿಕ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ

ಪ್ರತ್ಯೇಕವಾಗಿ ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಲಾಗಿರುವ 5 ಹತ್ತಿಯ ತುಂಡುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ.11 ಎಂದು ಗುರುತಿಸಲಾಯಿತು. ಮು.ಮಾ.11 ರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮು.ಮಾ.11(ಎ) ಎಂದು ಗುರುತಿಸಲಾಯಿತು.

13. ಸದರಿ ಪಂಚರ ಸಮಕ್ಷಮ 5 ಬಿಳಿ ಹತ್ತಿಯ ಸಣ್ಣ ಸಣ್ಣ ತುಂಡುಗಳನ್ನು ತೆಗೆದುಕೊಂಡು, ಅವುಗಳ ಮೇಲೆ ಡಿಸ್ಟಿಲ್ಡ್ ನೀರನ್ನು ಹಾಕಿ, ಆರೋಪಿಯ ಎಡಗೈನ ಬೆರಳುಗಳು ಮತ್ತು ಅಂಗೈನ ಮೇಲೆ ಸವರಿ ಸದರಿ ಹತ್ತಿಯ ತುಂಡುಗಳನ್ನು 5 ಪ್ರತ್ಯೇಕ ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಅವುಗಳನ್ನು ಒಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ಹಾಕಿ ಅದರ ಮುಚ್ಚಳವನ್ನು ಬಿಳಿಯ ಬಟ್ಟೆಯಿಂದ ಸುತ್ತಿ ಪಿ ಎಂಬ ಅಕ್ಷರದಿಂದ ಸೀಲು ಮಾಡಿ ಅದರ ಮೇಲೆ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ.

14. ಸದರಿ ಪ್ಲಾಸ್ಟಿಕ್ ಡಬ್ಬಿಯನ್ನು ನೋಡುತ್ತಿದ್ದು, ಅದು ಎಫ್ ಎಸ್ ಎಲ್ ಸೀಲಿನಿಂದ ಸೀಲಾಗಿದ್ದು ಅದನ್ನು ಆರೋಪಿಪರ ವಕೀಲರು ಮತ್ತು ಸಾರ್ವಜನಿಕ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಪ್ರತ್ಯೇಕವಾಗಿ ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಲಾಗಿರುವ 5 ಹತ್ತಿಯ ತುಂಡುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ.12 ಎಂದು ಗುರುತಿಸಲಾಯಿತು. ಮು.ಮಾ.12 ರ ಮೇಲೆ ಇರುವ

ಸಾಕ್ಷಿಯ ಸಹಿಯನ್ನು ಮು.ಮಾ.12(ಎ) ಎಂದು ಗುರುತಿಸಲಾಯಿತು.

15. ನಂತರ ಆರೋಪಿಯು ಒಂದು ಸಣ್ಣ ಚೆಕ್ಸ್ ಗಳ ಮಾಸಲು ಬಿಳಿ ಬಣ್ಣದ ಅರ್ಧ ತೋಳಿನ ಶರ್ಟು ಮತ್ತು ಮಾಸಲು ಕಪ್ಪು ಬಣ್ಣದ ಸಣ್ಣ ಗೀರುಗಳಿರುವ ಪ್ಯಾಂಟನ್ನು ಪಡೆದು, ಆತನಿಗೆ ಬದಲು ಬಟ್ಟೆಗಳನ್ನು ನೀಡಿ ಆರೋಪಿ ಧರಿಸಿದ್ದ ಬಟ್ಟೆಗಳನ್ನು ಪ್ರತ್ಯೇಕವಾಗಿ ಬಿಳಿಯ ಬಟ್ಟೆಯಲ್ಲಿ ಹಾಕಿ ಹೊಲೆದು, ಪಿ ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತುಪಡಿಸಿಕೊಂಡು ಅವುಗಳ ಮೇಲೆ ಪಂಚರ ಸಹಿಗಳಿರುವ ಚೀಟಿಯನ್ನು ಅಂಟಿಸಿರುತ್ತೇನೆ. ಸದರಿ ಶರ್ಟು ಮತ್ತು ಪ್ಯಾಂಟುಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ಮುಮಾ.13 ಮತ್ತು ಮು.ಮಾ.14 ಎಂದು ಗುರುತಿಸಲಾಯಿತು. ಮು.ಮಾ.13 ಮತ್ತು ಮು.ಮಾ.14 ರ ಮೇಲೆ ಇರುವ ಸಾಕ್ಷಿಯ ಸಹಿಗಳನ್ನು ಮು.ಮಾ.13(ಎ) ಮತ್ತು ಮು.ಮಾ.14(ಎ) ಎಂದು ಗುರುತಿಸಲಾಯಿತು.

16. ನಂತರ ಆರೋಪಿಯೊಂದಿಗೆ ಸಿಬ್ಬಂದಿಗಳು ಹಾಜರುಪಡಿಸಿದ್ದ ಆರೋಪಿಯು ಕೃತ್ಯಕ್ಕೆ ಬಳಸಿದ್ದ ಕೆ ಎ 18 ಆರ್ 7758 ನೋಂದಣಿ ಸಂಖ್ಯೆಯುಳ್ಳ ಬೈಕನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ. ಆ ಬಗ್ಗೆ ಮಧ್ಯಾಹ್ನ 1.45 ಗಂಟೆಯಿಂದ 2.45 ಗಂಟೆಯವರೆಗೆ ನಿಪಿ.5 ರಂತೆ ಮೇಲೆ ಹೇಳಿದ ಪಂಚರ ಸಮಕ್ಷಮ

ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಿಪಿ.5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಸಹಕರಿಸುವಂತೆ ಪಂಚರಿಗೆ ನೀಡಿದ್ದ ನೋಟೀಸನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.6, 7 ಮತ್ತು 26 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ. ನಿಪಿ.5 ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡಿದ್ದ ಮುದ್ದೆ ಮಾಲುಗಳು ಮತ್ತು ಬೈಕನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 146/2018 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.41 ಎಂದು, ಸಾಕ್ಷಿಯ ನಿಪಿ.41 (ಎ) ಎಂದು ಗುರುತಿಸಲಾಯಿತು.

17. ಅದೇ ದಿನ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯಕ್ಕೆ ಬಳಸಿದ್ದ ಪಿಸ್ತೂಲು ಮತ್ತು ಉಳಿದಿರುವ ಜೀವಂತ ಗುಂಡಗಳನ್ನು ತೋರಿಸುವುದಾಗಿ ನುಡಿದ ಮೇರೆಗೆ ಮೇಲೆ ಹೇಳಿದ ಪಂಚರು ಮತ್ತು ಆರೋಪಿಯೊಂದಿಗೆ ಠಾಣೆಯಿಂದ ಹೊರಟಿರುತ್ತೇನೆ. ಆರೋಪಿಯು ನಮ್ಮನ್ನು ಕಂಚುಗಾರನಹಳ್ಳಿಯಲ್ಲಿರುವ ತನ್ನ ವಾಸದ ಮನೆಯ ಒಳಗಡೆ ಕರೆದುಕೊಂಡು ಹೋಗಿ ಸದರಿ ಮನೆಯ ನಡುಮನೆಯಲ್ಲಿದ್ದ ಒಂದು ಗಾಡ್ರೆಜ್ ಬೀರುವನ್ನು ತೆಗೆದು, ಅದರಲ್ಲಿದ್ದ ಒಂದು

ಬಿಳಿಯ ಬಟ್ಟೆಯ ಬ್ಯಾಗನ್ನು ತೆಗೆದು, ಅದರಲ್ಲಿದ್ದ ಒಂದು ಪಿಸ್ತೂಲ್ ಮತ್ತು ಗುಂಡುಗಳನ್ನು ತೋರಿಸಿ ತನ್ನ ಹೆಂಡತಿಗೆ ಅದೇ ಪಿಸ್ತೂಲ್ ನಿಂದ ಗುಂಡು ಹಾರಿಸಿ ಕೊಲೆ ಮಾಡಿದ್ದಾಗಿ ತಿಳಿಸಿ ಹಾಜರುಪಡಿಸಿರುತ್ತಾರೆ. ಸದರಿ ಪಿಸ್ತೂಲನ್ನು ಪರಿಶೀಲಿಸಲಾಗಿ ಅದು ಕಪ್ಪು ಮತ್ತು ಸಿಲ್ವರ್ ಬಣ್ಣದ ಲೋಹದ ಕಂಟ್ರಿ ಮೇಡ್ ಪಿಸ್ತೂಲ್ ಆಗಿದ್ದು ಅದರ ಮೇಲೆ ಯಾವುದೇ ಹೆಸರನ್ನು ಬರೆದಿರುವುದಿಲ್ಲ, ಅದರ ಬ್ಯಾರೆಲ್ ಕಪ್ಪು ಬಣ್ಣದಾಗಿದ್ದು, ಅದು 7.5 ಸೆ ಮೀ ಉದ್ದ ಇರುತ್ತದೆ. ಅದಕ್ಕೆ ಹೊಂದಿಕೊಂಡಂತೆ ಇದ್ದ ಸ್ಟೀಲ್ ನ ಸ್ಲೈಡ್ ನ ಉದ್ದ ಸುಮಾರು 13.5 ಸೆ ಮೀ ಇರುತ್ತದೆ ಮತ್ತು ಅದರ ಕೆಳಭಾಗದ ಗ್ರಿಪ್ 7.5 ಸೆ ಮೀ ಇರುತ್ತದೆ ಹಾಗೂ ಆರೋಪಿ ಹಾಜರುಪಡಿಸಿದ 9 ಗುಂಡುಗಳು ಜೀವಂತ ಗುಂಡುಗಳಾಗಿದ್ದು, ಅವುಗಳ ಉದ್ದ 2.5 ಸೆ ಮೀ ಇರುತ್ತದೆ ಮತ್ತು ತಾಮ್ರದ ಭಾಗದ ಉದ್ದ 1.5 ಸೆ ಮೀ ಇರುತ್ತದೆ. ಅವುಗಳ ಹಿಂದೆ F ಎಂದು ಆಂಗ್ಲಭಾಷೆಯಲ್ಲಿ ಬರೆದಿರುತ್ತದೆ. ಸದರಿ ಪಿಸ್ತೂಲು ಮತ್ತು ಗುಂಡುಗಳನ್ನು ಪ್ರತ್ಯೇಕವಾಗಿ ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಅವುಗಳನ್ನು ಬಿಳಿಯ ಬಟ್ಟೆಯಲ್ಲಿ ಹೊಲೆದು ಪಿ ಎಂಬ ಅಕ್ಷರದಿಂದ ಸೀಲು ಮಾಡಿ ಅವುಗಳ ಮೇಲೆ ಪಂಚರ ಸಹಿಗಳಿರುವ ಚೀಟಿಗಳನ್ನು ಅಂಟಿಸಿ ಮೇಲೆ ಹೇಳಿದ ಪಂಚರ ಸಮಕ್ಷಮ ನಿಪಿ.8 ರಂತೆ ಮಧ್ಯಾಹ್ನ 3.30 ಗಂಟೆಯಿಂದ 4.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ

ಅಮಾನತುಪಡಿಸಿಕೊಂಡಿರುತ್ತೇನೆ. ನಿಪಿ.8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಇ) ಮತ್ತು ನಿಪಿ.8(ಎಫ್) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಫೋಟೋಗಳನ್ನು ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.9 ಮತ್ತು 10 ಎಂದು ಗುರುತಿಸಲಾಗಿರುತ್ತದೆ.

18. ನಿಪಿ.8 ಪಂಚನಾಮೆಯ ಕಾಲಕ್ಕೆ ಆರೋಪಿಯಿಂದ ಅಮಾನತುಪಡಿಸಿಕೊಂಡ ಪಿಸ್ತೂಲಿನ ಮತ್ತು 9 ಜೀವಂತ ಗುಂಡುಗಳ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ42 ಮತ್ತು ನಿಪಿ.43 ಎಂದು ಗುರುತಿಸಲಾಯಿತು.

19. ನಿಪಿ.8 ರ ಕಾಲಕ್ಕೆ ವಶಪಡಿಸಿಕೊಂಡ ಪಿಸ್ತೂಲು ಮತ್ತು ಗುಂಡುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 147/2018 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.44 ಎಂದು, ಸಾಕ್ಷಿಯ ನಿಪಿ.44(ಎ) ಎಂದು ಗುರುತಿಸಲಾಯಿತು.

20. ದಿನಾಂಕ 26.12.2018 ರಂದು ಆರೋಪಿತನು ತಾನು ಕೃತ್ಯಕ್ಕೆ ಬಳಸಿದ್ದ ಪಿಸ್ತೂಲನ್ನು ಖರೀದಿಸಿದ ಸ್ಥಳವನ್ನು ತೋರಿಸುವುದಾಗಿ ತಿಳಿಸಿದ ಮೇರೆಗೆ ಆರೋಪಿಯನ್ನು ಕರೆದುಕೊಂಡು ಚಿಕ್ಕಮಗಳೂರು ಮಾರ್ಕೆಟ್ ರಸ್ತೆಯಲ್ಲಿ ಆರೋಪಿ ತೋರಿಸಿದ ಸ್ಥಳಗಳಲ್ಲಿ ಹುಡುಕಾಡಲಾಗಿ

ಯಾವುದೇ ಬಂದೂಕು ರಿಪೇರಿ ಅಂಗಡಿ ಕಂಡು ಬಂದಿರುವುದಿಲ್ಲ. ಅದೇ ದಿನ ಆರೋಪಿಯನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

21. ನಂತರ ಅದೇ ದಿನ ಚಿಕ್ಕಮಗಳೂರಿನ ಮಾರ್ಕೆಟ್ ರಸ್ತೆಯಲ್ಲಿ ಈ ಹಿಂದೆ ಬಂದೂಕಿನ ರಿಪೇರಿ ಅಂಗಡಿಯನ್ನು ನಡೆಸುತ್ತಿದ್ದ ವೆಂಕಟೇಶ್ ಎಂಬುವವರ ಮಗನಾದ ಚಾಸಾ.13 ಚಂದ್ರಶೇಖರ್ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ಸಾಕ್ಷಿದಾರರಾದ ಫ್ರಾಸಾ.10 ಮತ್ತು ಫ್ರಾಸಾ.8 ರವರ ಹೇಳಿಕೆಯನ್ನು ನಿಪಿ.13 ರಂತೆ ಪಡೆದುಕೊಂಡಿರುತ್ತೇನೆ.

22. ದಿನಾಂಕ 30.12.2018 ರಂದು ಸಾಕ್ಷಿದಾರರಾದ ಫ್ರಾಸಾ.11, ಫ್ರಾಸಾ.2, ಫ್ರಾಸಾ.12 ರವರ ಹೇಳಿಕೆಗಳನ್ನು ನಿಪಿ.15 ರಿಂದ ನಿಪಿ.17 ರಂತೆ ಪಡೆದುಕೊಂಡಿರುತ್ತೇನೆ. ದಿನಾಂಕ 05.01.2019 ರಂದು ಕೃತ್ಯ ನಡೆದ ಸ್ಥಳದ ಅಸೆಸ್ ಮೆಂಟ್ ಪ್ರತಿಯನ್ನು ನೀಡುವಂತೆ ಚಾಸಾ.29 ರವರಿಗೆ ಮತ್ತು ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಫ್ರಾಸಾ.19 ರವರಿಗೆ ಮನವಿ ಸಲ್ಲಿಸಿರುತ್ತೇನೆ. ಸದರಿ ಮನವಿಯನ್ನು ನೋಡುತ್ತಿದ್ದು ಅದನ್ನು ನಿಪಿ.45 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.45(ಎ) ಎಂದು ಗುರುತಿಸಲಾಯಿತು.

23. ದಿನಾಂಕ 02.02.2019 ರಂದು ಕೃತ್ಯಕ್ಕೆ ಬಳಸಿದ್ದ ಬೈಕಿನ ಯಾಂತ್ರಿಕ ತಪಾಸಣೆಗಾಗಿ ತರೀಕೆರೆ ಆರ್ ಟಿ ಒ ಕಚೇರಿಗೆ ಮನವಿ ಸಲ್ಲಿಸಿರುತ್ತೇನೆ. ದಿನಾಂಕ 14.02.2019 ರಂದು ಕೃತ್ಯ ನಡೆದ ಸ್ಥಳದ ಅಸೆಸ್ ಮೆಂಟ್ ನ ದೃಢೀಕೃತ ಪ್ರತಿಯನ್ನು ಚಾಸಾ.29 ರವರಿಂದ ನಿಪಿ.30 ರಂತೆ ಪಡೆದುಕೊಂಡಿರುತ್ತೇನೆ. ನಿಪಿ.30 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.30(ಎ) ಎಂದು ಗುರುತಿಸಲಾಯಿತು.

24. ದಿನಾಂಕ 18.02.2019 ರಂದು ಮೃತಳ ಮರಣೋತ್ತರ ಪರೀಕ್ಷಾ ವರದಿಯಿಂದ ಫ್ರಾಸಾ.20 ರವರಿಂದ ನಿಪಿ.33 ರಂತೆ ಪಡೆದುಕೊಂಡಿರುತ್ತೇನೆ ಮತ್ತು ಅದೇ ದಿನ ಮೃತಳ ಮರಣೋತ್ತರ ಪರೀಕ್ಷಾ ಕಾಲದಲ್ಲಿ ಫ್ರಾಸಾ.20 ರವರು ಸಂಗ್ರಹಿಸಿದ್ದ 2 ವಸ್ತುಗಳನ್ನು ಚಾಸಾ.25 ರವರು ತಂದು ಹಾಜರುಪಡಿಸಿದ್ದು, ಅವುಗಳನ್ನು ಪಂಚರಾದ ಫ್ರಾಸಾ.2 ಮತ್ತು ಫ್ರಾಸಾ.3 ರವರ ಸಮಕ್ಷಮ ನಿಪಿ.3 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ನಿಪಿ.3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಸಿ) ಎಂದು ಗುರುತಿಸಲಾಯಿತು.

25. ಸದರಿ ಪಂಚನಾಮೆಯ ಪಂಚರಿಗೆ ನಿಪಿ.2 ರಂತೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ನಿಪಿ.2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ನಿಪಿ.3 ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 24(A)/2019 ರಲ್ಲಿ

ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.46 ಎಂದು, ಸಾಕ್ಷಿಯ ನಿಪಿ.46 (ಎ) ಎಂದು ಗುರುತಿಸಲಾಯಿತು.

26. ನಂತರ ಚುನಾವಣೆ ಪ್ರಯುಕ್ತ ನನಗೆ ವರ್ಗಾವಣೆಯಾಗಿದ್ದ ಕಾರಣ ದಿನಾಂಕ 28.02.2019 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.34 ರವರಿಗೆ ಹಸ್ತಾಂತರಿಸಿರುತ್ತೇನೆ.

27. ನಂತರ 16.07.2019 ರಂದು ನಾನು ಪುನಃ ಕಡೂರು ವೃತ್ತ ನಿರೀಕ್ಷಕನಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ನಂತರ ದಿನಾಂಕ 27.09.2020 ರಂದು ಎಫ್ ಎಸ್ ಎಲ್ ವರದಿಯನ್ನು ಸ್ವೀಕರಿಸಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.47 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.47(ಎ) ಎಂದು ಗುರುತಿಸಲಾಯಿತು.

28. ನಿಪಿ.8 ರ ಕಾಲಕ್ಕೆ ವಶಪಡಿಸಿಕೊಳ್ಳಲಾದ ಪಿಸ್ತೂಲನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ. ನಿಪಿ.8 ರ ಕಾಲಕ್ಕೆ 9 ಜೀವಂತ ಗುಂಡುಗಳನ್ನು ವಶಪಡಿಸಿಕೊಂಡಿದ್ದಾಗಿ ಸಾಕ್ಷಿಯು ನುಡಿದಿರುತ್ತಾರೆ, ಸದರಿ ಗುಂಡುಗಳು ಇವೆ ಎಂದು ಹೇಳಿ ಬಿಳಿಯ ಬಟ್ಟೆಯಲ್ಲಿ ಹೊಲೆದು ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದ ವಸ್ತುಗವನ್ನು ಆರೋಪಿ ಪರ ವಕೀಲರು ಮತ್ತು

ಸರ್ಕಾರಿ ಅಭಿಯೋಜಕರ ಪರ ತೆರೆದು ನೋಡಲಾಗಿ ಅದರಲ್ಲಿ 2 ಜೀವಂತ ಗುಂಡುಗಳಿರುತ್ತವೆ ಮತ್ತು ಅವುಗಳನ್ನು ಮು.ಮಾ.15 ಎಂದು ಗುರುತಿಸಲಾಯಿತು. ಎಫ್ ಎಸ್ ಎಲ್ ತಜ್ಞರು ತಮ್ಮ ವರದಿಯಲ್ಲಿ 9 ಜೀವಂತ ಗುಂಡುಗಳ ಪೈಕಿ 7 ಜೀವಂತ ಗುಂಡುಗಳನ್ನು ಟೆಸ್ಟ್ ಫೈಯರಿಂಗ್ ಮಾಡಿದ್ದಾಗಿ ತಮ್ಮ ನಿಪಿ.47 ವರದಿಯಲ್ಲಿ ನಮೂದಿಸಿರುತ್ತಾರೆ. ಸದರಿ ಟೆಸ್ಟ್ ಫೈಯರಿಂಗ್ ಮಾಡಲಾದ 7 empty case ಗಳನ್ನು ಮು.ಮಾ.16 ಎಂದು ಗುರುತಿಸಲಾಯಿತು. ಟೆಸ್ಟ್ ಫೈಯರಿಂಗ್ ಮಾಡಲಾದ 6 ಗುಂಡುಗಳನ್ನು ಮು.ಮಾ.17 ಎಂದು ಗುರುತಿಸಲಾಯಿತು.

29. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ ಕೆ ಎಸ್ ಎಸ್ ಪಿ ವಕೀಲರಿಂದ ಆರೋಪಿ ಪರವಾಗಿಃ</u>

30. ನಾನು ಫ್ರಾಸಾ.21 ರವರಿಂದ ತನಿಖೆಯನ್ನು ವಹಿಸಿಕೊಳ್ಳುವ ಸಮಯಕ್ಕೆ ನಾನು ಸ್ಥಳದಲ್ಲಿಯೇ ಇದ್ದೆನು. ಆ ದಿನ ನಾನು ಸಂಜೆ ಸುಮಾರು 4.30 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿದ್ದೆನು. ಆ ದಿನ ನಾನು ಮತ್ತು ನಮ್ಮ ಸಿಬ್ಬಂದಿಗಳು ಒಟ್ಟಿಗೆ ಸ್ಥಳಕ್ಕೆ ಹೋಗಿದ್ದೆವು. ಸದರಿ ಸಿಬ್ಬಂದಿಗಳ ಹೆಸರು ನನಗೆ ನೆನಪಿಲ್ಲ. ಫ್ರಾಸಾ.21 ರವರಿಂದ ಮುಂದಿನ

ತನಿಖೆಗಾಗಿ ಕಡತವನ್ನು ಸ್ವೀಕರಿಸಿದಾಗ ಸಮಯ ಸಂಜೆ ಸುಮಾರು 5.00 ಗಂಟೆಯಾಗಿತ್ತು. ಶವತನಿಖೆಯನ್ನು ನಡೆಸುವ ಸಮಯದಲ್ಲಿ ಆಜುಬಾಜುದಾರರ ಮನೆಯವರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಅಕ್ಕಪಕ್ಕದ ಮನೆಯವರನ್ನು ವಿಚಾರಿಸಿಲ್ಲ ಆದರೆ ಸದರಿ ಗ್ರಾಮದ ಮುಳ್ಳಪ್ಪ ಮತ್ತು ಹರೀಶ್ ಎಂಬುವವರನ್ನು ವಿಚಾರಿಸಿದ್ದೇನೆ ಎನ್ನುತ್ತಾರೆ.

31. ಆರೋಪಿಯ ಪತ್ತೆಗೆ ನೇಮಿಸಿದ್ದ ಸಿಬ್ಬಂದಿಗಳಿಗೆ ನಾನು ಆರೋಪಿತನ ಫೋಟೋವನ್ನು ಕೊಟ್ಟಿರಲಿಲ್ಲ. ರಾತ್ರಿ 8.30 ಗಂಟೆಗೆ ಶವತನಿಖೆಯನ್ನು ಮುಗಿಸಿದ ನಂತರ ಶವವನ್ನು ಶಿವಮೊಗ್ಗದ ಸಿಮ್ಸ್ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಸಿಬ್ಬಂದಿಯಾದ ಚಾಸಾ.23 ರವರೊಂದಿಗೆ ಮನವಿ ಪತ್ರದೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ ನಿಪಿ.19 ರ ಕಲಂ 16 ರಲ್ಲಿ ಮೃತೆ ಜ್ಯೋತಿಬಾಯಿಯ ಶವದ ಬೆಂಗಾವಲಿಗೆ ಸಿಬ್ಬಂದಿ ಮಹಿಳಾ ಪಿ ಸಿ 42 ಜಯಮ್ಮರವರಿಗೆ ಕೊಟ್ಟಿದ್ದಾಗಿ ತಿಳಿಸಿದ್ದೀರಿ ಎಂದರೆ ಸಾಕ್ಷಿ ಟೈಪಿಂಗ್ ಮಿಸ್ಟೇಕ್ ನಿಂದಾಗಿ ಮೃತಳ ಹೆಸರು ಜಯಮ್ಮನ ಬದಲಿಗೆ ಜ್ಯೋತಿ ಬಾಯಿ ಎಂದು ತಪ್ಪಾಗಿ ನಮೂದಾಗಿರುತ್ತದೆ ಎನ್ನುತ್ತಾರೆ. ಸದರಿ ತಪ್ಪು ನನ್ನ ಗಮನಕ್ಕೆ ಬಂದಿರುವುದಿಲ್ಲ. ನಿಪಿ.19 ನ್ನು ನಿಮ್ಮ ಕಚೇರಿಯಲ್ಲಿ ತಯಾರಿಸಿದ್ದೀರಿ ಎಂದರೆ ಸರಿಯಲ್ಲ.

32. ಪ್ರಥಮ ವರ್ತಮಾನ ವರದಿ ನ್ಯಾಯಾಲಯಕ್ಕೆ ಎಷ್ಟು ಗಂಟೆಗೆ ತಲುಪಿತು ಎಂದು ನನಗೆ ಹೇಳಲಾಗುವುದಿಲ್ಲ. ಮೃತಳ ಮನೆಯ ಹಿಂದೆ ಕಿಟಕಿಗಳು ಇದ್ದವು, ಆದರೆ ಎಷು ಕಿಟಕಿಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ ಮತ್ತು ಆ ಬಗ್ಗೆ ನಿಪಿ.19 ರಲ್ಲಿ ನಮೂದಿಸಿಲ್ಲ. ಮೃತಳ ಮನೆಯ ಹಾಲಿನಲ್ಲಿ ಕಿಟಕಿ ಇತ್ತು.

33. ನೀವು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಅಲ್ಲಿಗೆ ಯಾರು ಯಾರು ಹೋಗಿದ್ದರು ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.32 ರ ನಕ್ಷೆಯಲ್ಲಿ ಯಾವುದೇ ಕಿಟಕಿಗಳನ್ನು ತೋರಿಸಿಲ್ಲ ಎಂದರೆ ಸರಿ. ನಿಪಿ.32 ರಲ್ಲಿ ತೋರಿಸಿರುವ ಕೊಟ್ಟಿಗೆಮನೆ ಮತ್ತು ಹಾಲಿನ ಮಧ್ಯೆ ಗೋಡೆ ಇತ್ತೆ ಎಂದರೆ ಸಾಕ್ಷಿ ಗೋಡೆ ಇರಲಿಲ್ಲ ಆದರೆ ಸುಮಾರು 1 ರಿಂದ 1 ವರೆ ಅಡಿ ಎತ್ತರದ ಕಟ್ಟೆಯನ್ನು ಕಟ್ಟಾಲಾಗಿತ್ತು ಎನ್ನುತ್ತಾರೆ. ಸದರಿ ಕೊಟ್ಟಿಗೆಗೆ ಹೋಗಲು ಪ್ರತ್ಯೇಕ ಬಾಗಿಲು ಇದೆ. ಸದರಿ ಕೊಟ್ಟಿಗೆಗೆ ಹಾಲಿನ ಮೂಲಕವೂ ಹೋಗಬಹುದು ಎಂದರೆ ಸರಿ.

34. ಮನೆಯ ಹಾಲಿನ ಬಾಗಿಲು ಯಾವ ದಿಕ್ಕಿಗೆ ತೆರೆದುಕೊಳ್ಳುತ್ತಿತ್ತು ಎಂದರೆ ಸಾಕ್ಷಿ ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ನೀವು ನಿಪಿ.19 ರಲ್ಲಿ ಮೃತಳ ಎಡಗಾಲಿನ ಪಾದದ ಮೇಲೆ ಸುಮಾರು 1 ಇಂಚು ಉದ್ದದ

ರಕ್ತಗಾಯವಾಗಿರುವುದಾಗಿ ತಿಳಿಸಿದ್ದೀರಿ ಆದರೆ ಆ ರೀತಿ ಯಾವುದೇ ಗಾಯದ ಬಗ್ಗೆ ನಿಪಿ.33 ಮರಣೋತ್ತರ ಪರೀಕ್ಷೆಯಲ್ಲಿ ನಮೂದಾಗಿಲ್ಲ ಎಂದರೆ ಸರಿ. ಮೃತ ಬಟ್ಟೆಗಳು ಹರಿದುಹೋಗಿದ್ದ ಬಗ್ಗೆ ಮತ್ತು ಅವುಗಳಿಗೆ ತೂತು ಆಗಿದ್ದ ಬಗ್ಗೆ ನಾನು ಪರಿಶೀಲಿಸಿಲ್ಲ.

35. ನಾನು ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ಮನೆಯಲ್ಲಿ ಒಬ್ಬ ಅಜ್ಜಿ ಇದ್ದರು, ಪಿರ್ಯಾದಿ ನಂತರ ಬಂದರು. ದೂರನ್ನು ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ್ದಾರೆ. ನಾನು ಪಿರ್ಯಾದಿಯನ್ನು ಕೃತ್ಯ ನಡೆದ ಸ್ಥಳದಲ್ಲಿ ಸುಮಾರು 4.45 ಗಂಟೆಯಿಂದ 5.00 ಗಂಟೆ ಸಮಯದಲ್ಲಿ ವಿಚಾರಿಸಿದ್ದೇನೆ. ನೀವು ಸ್ಥಳಕ್ಕೆ ಹೋಗಿದ್ದಾಗಿ ಮತ್ತು ಅಲ್ಲಿ ಪಂಚರ ಸಮಕ್ಷಮ ಶವಪಂಚನಾಮೆಯನ್ನು ಜರುಗಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಮು.ಮಾ.6 ರಿಂದ ಮು.ಮಾ.8 ಬಿದ್ದಿದ್ದವು ಮತ್ತು ಅವುಗಳನ್ನು ನೀವು ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

36. ನೀವು ನಿಪಿ.19 ರಲ್ಲಿ ನಮೂದಿಸಿರುವ ಗಾಯಗಳಿಗೂ ನಿಪಿ.33 ವರದಿಯಲ್ಲಿ ನಮೂದಿಸಿರುವ ಗಾಯಗಳಿಗೂ ವ್ಯತ್ಯಾಸವಿದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಕೃತ್ಯ ನಡೆದಿದೆ ಎನ್ನಲಾದ ದಿನ ನಾನು ಆರೋಪಿ ವಾಸವಿದ್ದ

ಮನೆಗೆ ಭೇಟಿ ನೀಡಿಲ್ಲ. ಕೃತ್ಯ ನಡೆದ ಸ್ಥಳದಿಂದ ಆರೋಪಿಯ ಮನೆ ಸುಮಾರು ಅರ್ಧ ಕಿಲೋ ಮೀಟರ್ ದೂರದಲ್ಲಿತ್ತು. ಆ ದಿನ ಆರೋಪಿ ತನ್ನ ಮನೆಗೆ ಹೋಗಿದ್ದ ಬಗ್ಗೆ ಆತನ ಅಕ್ಕಪಕ್ಕದ ಮನೆಯವರನ್ನು ನಾನು ವಿಚಾರಿಸಿಲ್ಲ.

37. ಅಯ್ಯನಕೆರೆಯಿಂದ ಕಲ್ಮರಡಿ ಮಠಕ್ಕೆ ಬರಲು ಯಾವುದೇ ರಸ್ತೆಯಿಲ್ಲ. ಕಲ್ಮರಡಿ ಮಠದ ಗ್ರಾಮಸ್ಥರನ್ನು ನಾನು ವಿಚಾರಿಸಿಲ್ಲ. ಆರೋಪಿಯನ್ನು ವಶಕ್ಕೆ ಪಡೆಯುವ ಮೊದಲು ಆತ ಎಲ್ಲಿ ಉಳಿದುಕೊಂಡಿದ್ದನು ಎಂದು ನಾನು ವಿಚಾರಿಸಿಲ್ಲ. ನಿಮ್ಮ ಠಾಣೆಯಲ್ಲಿ ಪಿಸ್ತೂಲುಗಳನ್ನು ಗುಂಡುಗಳನ್ನು ಇಡಲಾಗುತ್ತದೆ ಎಂದರೆ ಸಾಕ್ಷಿ ಇಲಾಖೆಯಿಂದ ನೀಡಲಾಗುವ ಪಿಸ್ತೂಲುಗಳು ಮತ್ತು ಮದ್ದುಗುಂಡುಗಳನ್ನು ಪ್ರತ್ಯೇಕ ಭದ್ರತಾ ಕೋಣೆಯಲ್ಲಿ ಇರಿಸಲಾಗುತ್ತದೆ ಎನ್ನುತ್ತಾರೆ.

38. ವೈದ್ಯರಿಗೆ ಸಲ್ಲಿಸಿದ ಮನವಿಯಲ್ಲಿ ಶವದಲ್ಲಿದ್ದ Entry wound ಮತ್ತು Exit wound ಗಳು ಇದ್ದ ಜಾಗವನ್ನು ಪ್ರತ್ಯೇಕವಾಗಿ ಸಂಗ್ರಹಿಸಿಕೊಡುವಂತೆ ಕೇಳಿದ್ದೀರಾ ಎಂದರೆ ಸಾಕ್ಷಿ ಆ ರೀತಿ ಪ್ರತ್ಯೇಕವಾಗಿ ಕೇಳಿಲ್ಲ ಕೇವಲ ಪರೀಕ್ಷೆ ನಡೆಸಿ ವರದಿ ಕೊಡಿ ಎಂದು ಕೇಳಿದ್ದೇನೆ ಎನ್ನುತ್ತಾರೆ. ಕೃತ್ಯಕ್ಕೆ ಬಳಸಲಾಗಿದೆ ಎನ್ನಲಾದ ವಸ್ತುಗಳನ್ನು ವೈದ್ಯಾಧಿಕಾರಿಗಳಿಗೆ ಕಳುಹಿಸಿ ಅವರ ಅಭಿಪ್ರಾಯವನ್ನು ಪಡೆದುಕೊಂಡಿಲ್ಲ

ಕಾರಣ ಅವುಗಳನ್ನು ತಜ್ಞರ ಪರೀಕ್ಷೆಗಾಗಿ ಎಫ್ ಎಸ್ ಎಲ್ ನ ಬ್ಯಾಲಿಸ್ಟಿಕ್ ಎಕ್ಸ್ ಪರ್ಟ್‌ಗೆ ಕಳುಹಿಸಿದ್ದೇನೆ. ಮೃತಳು ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದಾಗಿ ದೂರಿನಲ್ಲಿ ತಿಳಿಸಿದ್ದು ಆ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

39. ಆರೋಪಿಯನ್ನು ದಸ್ತಗಿರಿ ಮಾಡಿದ ನಂತರ ಆತನ ಅಂಗಶೋಧನೆಯನ್ನು ಮಾಡಿ ಪಂಚನಾಮೆಯನ್ನು ಜರುಗಿಸಿದ್ದೇನೆ ಆದರೆ ಆತನನ್ನು ದಸ್ತಗಿರಿ ಮಾಡುವ ಮೊದಲು ಅಂಗಶೋಧನೆ ಮಾಡಿಲ್ಲ. ವೆಂಕಟೇಶ್ ಅಥವಾ ಆತನ ಮಗನಾದ ಚಾಸಾ.13 ಚಂದ್ರಶೇಖರ್ ರವರ ಹೆಸರಿನಲ್ಲಿ ಪಿಸ್ತೂರಿ ರಿಪೇರಿ ಮಾಡಲು ಅಂಗಡಿ ಇದ್ದ ಬಗ್ಗೆ ಮತ್ತು ಲೈಸನ್ಸನ್ನು ಪಡೆದುಕೊಂಡಿದ್ದ ಬಗ್ಗೆ ಯಾವುದಾದರೂ ದಾಖಲೆಯನ್ನು ವಶಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ಬಗ್ಗೆ ಜಿಲ್ಲಾಧಿಕಾರಿ ಅಥವಾ ಪೊಲೀಸ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿ ವರದಿ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ಬಗ್ಗೆ ಮಾರ್ಕೆಟ್ ರಸ್ತೆಯಲ್ಲಿರುವ ಅಂಗಡಿಯವರನ್ನು ವಿಚಾರಿಸಿಲ್ಲ ಮತ್ತು ಅವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ.

40. ನೀವು ಎಷ್ಟು ಬಾರಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಭೇಟಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ದಿನಾಂಕ 24, 25 ಮತ್ತು

26 ರಂದು ಭೇಟಿ ನೀಡಿದ್ದೇನೆ ಎನ್ನುತ್ತಾರೆ. ಪಿಸ್ತೂಲುಗಳನ್ನು ಉಪಯೋಗಿಸುವ ಬಗ್ಗೆ ಮಾತ್ರ ನನಗೆ ಮಾಹಿತಿ ಇರುತ್ತದೆ ಆದರೆ ಅವುಗಳನ್ನು ತಯಾರಿಸುವ ಬಗ್ಗೆ ಮಾಹಿತಿ ಇಲ್ಲ. ಯಾವ ಆಧಾರದ ಮೇಲೆ ಪಿಸ್ತೂಲು ಕಂಟ್ರಿ ಮೇಡ್ ಎಂದು ಪಂಚನಾಮೆಯಲ್ಲಿ ನಮೂದಿಸಿದ್ದೀರಿ ಎಂದರೆ ಸಾಕ್ಷಿ ಅದರ ಮೇಲೆ ಯಾವುದೇ ಬಟ್ ನಂಬರ್ ಮತ್ತು ಕಂಪೆನಿಯ ಹೆಸರು ನಮೂದಾಗಿಲ್ಲದ ಕಾರಣ ಆ ರೀತಿ ಬರೆದಿದ್ದೇನೆ ಎನ್ನುತ್ತಾರೆ. ಸದರಿ ಪಿಸ್ತೂಲು ಆರೋಪಿಯ ಬಳಿ ಹೇಗೆ ಬಂತು ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಮೇಲೆ ಹೇಳಿದಂತೆ ಚಿಕ್ಕಮಗಳೂರು ಮಾರ್ಕೆಟ್ ರಸ್ತೆಯಲ್ಲಿ ವಿಚಾರಿಸಿ ಚಾಸಾ.13 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ ಎನ್ನುತ್ತಾರೆ.

41. ಆರೋಪಿಯ ಮನೆಯ ಹಿಂಭಾಗದಲ್ಲಿರುವ ಬಾಗಿಲು ಸಂಪೂರ್ಣ ಹಾಳಾಗಿದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಆತನ ಮನೆಯ ಮೇಲ್ಭಾಗದ ಹೆಂಚುಗಳನ್ನು ಸಹ ತೆಗೆಯಲಾಗಿದೆ ಎಂದರೆ ಸಾಕ್ಷಿ ಮೊದಲಿಗೆ ನನಗೆ ಗೊತ್ತಿಲ್ಲ ಎಂದು ನುಡಿದು ನಂತರ ತೆಗೆದಿರಲಿಲ್ಲ ಎನ್ನುತ್ತಾರೆ. ಮಧ್ಯಾಹ್ನ 1.30 ಗಂಟೆ ನಂತರ ಆರೋಪಿಯನ್ನು ಕರೆದುಕೊಂಡು ಮಹಜರ್ ಗೆ ಹೊರಟೆನು. ನಿಪಿ.4 ನೋಟೀಸನ್ನು ಪಂಚರಿಗೆ ನಾನು

ಠಾಣೆಯಲ್ಲಿಯೇ ಜಾರಿ ಮಾಡಿದ್ದೇನೆ. ಸಾಮಾನ್ಯವಾಗಿ ನೀವು ಆರೋಪಿತರನ್ನು ದಸ್ತಗಿರಿ ಮಾಡುವ ಪೂರ್ವದಲ್ಲಿ ಅವರ ಬಳಿ ಇರುವ ವಸ್ತುಗಳನ್ನು ಜಪ್ತಿ ಮಾಡುತ್ತೀರಿ ಎಂದರೆ ಸಾಕ್ಷಿ ಅವಶ್ಯಕತೆ ಇದ್ದಲ್ಲಿ ಮಾತ್ರ ಮಾಡುತ್ತೇವೆ ಎನ್ನುತ್ತಾರೆ

42. ಕೃತ್ಯ ನಡೆದ ಸ್ಥಳದಿಂದ ಪ್ರಾಸಾ.16 ಹಾಲಪ್ಪರವರ ಮನೆ ಎಷ್ಟು ದೂರದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿ ಬಟ್ಟೆಯ ಬ್ಯಾಗಿನಿಂದ ಪಿಸ್ತೂಲನ್ನು ತೆಗೆದು ಹಾಜರುಪಡಿಸಿದ್ದಾಗಿ ಹೇಳಿದ್ದೀರಿ ಸದರಿ ಬ್ಯಾಗನ್ನು ಅಮಾನತುಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

43. ಪಿಸ್ತೂಲನ್ನು ಕೃತ್ಯಕ್ಕೆ ಬಳಸಿದ್ದೇ ಆದರೆ ಅದನ್ನು ಇಟ್ಟಿದ್ದ ಬ್ಯಾಗಿನಲ್ಲಿ ಜಿ ಎಸ್ ಆರ್ ಸಿಗುತ್ತದೆ ಎಂದರೆ ಸಾಕ್ಷಿ ಸಾಮಾನ್ಯವಾಗಿ ಸಿಗುವುದಿಲ್ಲ ಎನ್ನುತ್ತಾರೆ. ಒಬ್ಬ ಮನುಷ್ಯ ಹಲವಾರು ಕಡೆ ಪ್ರಯಾಣ ಮಾಡಿ ಬಂದಿದ್ದರೇ ಆತ ಧರಿಸಿದ್ದ ಬಟ್ಟೆಗಳಲ್ಲಿ ಜಿ ಎಸ್ ಆರ್ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಕಂಡು ಬರುತ್ತದೆ ಎನ್ನುತ್ತಾರೆ.

44. ಮು.ಮಾ.13 ಮತ್ತು ಮು.ಮಾ.14 ಬಟ್ಟೆಗಳು ಆರೋಪಿಗೆ ಸಂಬಂಧಿಸಿದ್ದಲ್ಲ ಅವುಗಳನ್ನು ನೀವು ಪ್ರಕರಣಕ್ಕಾಗಿ ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಮಹಜರನ್ನು ಜರುಗಿಸಿ ಮು.ಮಾ.11 ಮತ್ತು

ಮು.ಮಾ.12 ನ್ನು ವಶಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

45. ಪಂಚರ ಸಮಕ್ಷಮ ಬೈಕನ್ನು ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಬಳಿ ನಿಪಿ.40 ರಂತೆ ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದಾಗಿ ಹೇಳಿರುವುದು ಸುಳ್ಳು ಆ ರೀತಿ ಯಾವುದೇ ಹೇಳಿಕೆಯನ್ನು ಆರೋಪಿ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನೀವೇ ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ಸ್ವಇಚ್ಛಾ ಹೇಳಿಕೆಯ ಮೇರೆಗೆ ನಿಪಿ.8 ರಂತೆ ಪಂಚನಾಮೆಯನ್ನು ಜರುಗಿಸಿ ಮು.ಮಾ.1 ಪಿಸ್ತೂಲು ಮತ್ತು 9 ಜೀವಂತ ಗುಂಡುಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

46. ಪಿಸ್ತೂಲನ್ನು ವಶಪಡಿಸಿಕೊಳ್ಳು ಸಮಯಕ್ಕೆ ಅದರ ಮೇಲೆ ಫಿಂಗರ್ ಪ್ರಿಂಟ್ಸ್ ಇರುವ ಬಗ್ಗೆ ಪರೀಕ್ಷಿಸಿದ್ದೀರಾ ಎಂದರೆ ಸಾಕ್ಷಿ ಪರೀಕ್ಷೆ ಮಾಡಿಸಿದ್ದೇನೆ ಆದರೆ ಆ ಬಗ್ಗೆ ಯಾವುದೇ ಗುರುತು ಕಂಡು ಬಂದಿಲ್ಲ ಎನ್ನುತ್ತಾರೆ. ಆ ಬಗ್ಗೆ ಯಾವುದೇ ವರದಿಯನ್ನು ಪಡೆದುಕೊಂಡಿಲ್ಲ. ಮು.ಮಾ.1, 8 ಮತ್ತು 9 ಜೀವಂತ ಗುಂಡುಗಳನ್ನು ಪ್ರಕರಣಕ್ಕಾಗಿ

ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

47. ಫ್ರಾಸಾ.2 ಮತ್ತು ಫ್ರಾಸಾ.3 ರವರ ಸಮಕ್ಷಮ ನಿಪಿ.3 ರಂತೆ ಪಂಚನಾಮೆಯನ್ನು ಜರುಗಿಸಿ ಮುದ್ದೆ ಮಾಲುಗಳನ್ನು ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಸ್ಥಳದಲ್ಲಿ ಫೋಟೋಗಳನ್ನು ತೆಗೆಸಿದ್ದಾಗಿ ಹೇಳಿರುವುದು ಸುಳ್ಳು ಮತ್ತು ಅವುಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ನಿಪಿ.32 ರಂತೆ ಫ್ರಾಸಾ.19 ರವರಿಗೆ ನಿಮ್ಮ ಪ್ರಭಾವವನ್ನು ಬೀರಿ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

48. ನಿಪಿ.47 ರಂತೆ ಎಫ್ ಎಸ್ ಎಲ್ ವರದಿಯನ್ನೂ ಸಹ ನಿಮ್ಮ ಪ್ರಭಾವವನ್ನು ಬೀರಿ ಪ್ರಕರಣಕ್ಕೆ ಅನುಕೂಲವಾಗುವಂತೆ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯನ್ನು ವಿಚಾರಣೆಗಾಗಿ ಠಾಣೆಗೆ ಕರೆಯಿಸಿ ಆತನನ್ನು ಪ್ರಕರಣದಲ್ಲಿ ಫಿಕ್ಸ್ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತನಿಖಾ ಕಾಲದಲ್ಲಿ ಆರೋಪಿಗೂ ಕೃತ್ಯಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಕಂಡು ಬಂದಿದೆ ಎಂದರೆ ಸರಿಯಲ್ಲ. ಕಲ್ಮರಡಿ ಮಠದಿಂದ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿರುವುದು ಸುಳ್ಳು ಎಂದರೆ

ಸರಿಯಲ್ಲ.

49. ನಿಮ್ಮ ತನಿಖಾ ಕಾಲದಲ್ಲಿ ಯಾವುದೇ ಸಾಕ್ಷಿದಾರರು ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

50. ಮು.ಮಾ.1 ರ ಮೇಲೆ ಯಾವುದೇ ಅಕ್ಷರ ಅಥವಾ ಸೀಲು ಇದ್ದ ಬಗ್ಗೆ ಕಂಡು ಬಂದಿಲ್ಲ. ನೀವು ಯಾವುದೇ ಹಂತದ ತನಿಖೆಯನ್ನು ನಡೆಸದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ